## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:ಮಂಗಳೂರು ವಿಭಾಗ:ಮಂಗಳೂರು

ಸಂ:ಕರಾಸ:ಮಂವಿ:ಸಂ:ವಾ: 1523 :2018-19 ದಿನಾಂಕ:31.07.2018

### : ಇ-ಟೆಂಡರ್/ಸಂಧಾನ ಪ್ರಕಟಣೆ ಸಂ:02/2018-19:

### (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

****

ಕ.ರಾ.ರ.ಸಾ.ನಿಗಮದ ಮಂಗಳೂರು ವಿಭಾಗದ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಬಸ್ಸು ನಿಲ್ದಾಣಗಳ ಖಾಲಿಯಾಗಲಿರುವ/ಖಾಲಿಯಿರುವ ವಾಣಿಜ್ಯ ಮಳಿಗೆ ಮತ್ತು ಎ.ಟಿ.ಎಂ. ಕೌಂಟರ್‌ಗಳಿಗೆ ಖಾಯಂ ಮಳಿಗೆ 05 ವರ್ಷದ ಅವಧಿಗ ಮತ್ತು ತೆರೆದ ಸ್ಥಳ ಮೂರು(03) ವರ್ಷದ ಅವಧಿಗೆ (ಪ್ರತೀ ವರ್ಷ ಶೇ.10ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗ ಪರವಾನಿಗೆದಾರರನ್ನು ಆಯ್ಕೆ ಮಾಡಿ ಪರವಾನಿಗೆ ನೀಡಲು ಇ-ಟೆಂಡರ್ ಮತ್ತು ಸಂಧಾನ ಕರೆಯಲಾಗಿದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http./www.eproc.karnataka.gov.in" ನಿಂದ ದಿ:03.08.2018 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪರವಾನಿಗೆ ಅವಧಿ ಪೂರ್ಣಗೊಂಡ ನಂತರ ಪುನಃ ಇ-ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು.

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:787/2017 ರಂತೆ ಇ-ಟೆಂಡರ್‌ಗೆ ಒಳಪಡುವ ಮಳಿಗೆಯ ವಿವರ :**

| ಕ್ರ. ಸಂ | ವಾಣಿಜ್ಯ ಮಳಿಗೆಯ ಹೆಸರು | ಖಾಲಿ ಇರುವ/ ಆಗಲಿರುವ ದಿನಾಂಕ | ವಾಹನ ನಿಲ್ದಾಣದ ಹೆಸರು | ವಿವರ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ ರೂ.ಗಳಲ್ಲಿ | ಇಎಂಡಿ ಹಣ ರೂ.ಗಳಲ್ಲಿ | ಅರ್ಜಿ ಶುಲ್ಕ ರೂ.ಗಳಲ್ಲಿ | GST 18% | ವಿಸ್ತೀರ್ಣ ಚದರ ಅಡಿಗಳಲ್ಲಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಕಾರ್ ಪಾರ್ಕಿಂಗ್ (ತೆರೆದ ಸ್ಥಳ) | - | ಮಂಗಳೂರು | 3ನೇ ಬಾರಿ | 28859/- | 86,577/- | 289/- | 52/- | 6550.0 |
| 2 | ಉಪಹಾರಗೃಹ (ಸಸ್ಯಾಹಾರಿ) | 12.11.2018 | ಮಂಗಳೂರು | 2ನೇ ಬಾರಿ | 330550/- | 991650/- | 3000/- | 540/- | 3299. |
| 3 | ಉಪಹಾರಗೃಹ (ಸಸ್ಯಾಹಾರಿ) | 18.11.2018 | ಕುಂದಾಪುರ | 1ನೇ ಬಾರಿ | 115353/- | 346059/- | 1154/- | 208/- | 1134. |

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:787/2017 ರಂತೆ ಸಂಧಾನಕ್ಕೆ(ವೈಯಕ್ತಿಕ) ಒಳಪಡುವ ಮಳಿಗೆಯ ವಿವರ :**

| ಕ್ರ. ಸಂ. | ವಾಣಿಜ್ಯ ಮಳಿಗೆಯ ಹೆಸರು | ಖಾಲಿ ಇರುವ/ ಆಗಲಿರುವ ದಿನಾಂಕ | ವಾಹನ ನಿಲ್ದಾಣದ ಹೆಸರು | ವಿವರ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ ರೂ.ಗಳಲ್ಲಿ | ಇಎಂಡಿ ಹಣ ರೂ.ಗಳಲ್ಲಿ | ಅರ್ಜಿ ಶುಲ್ಕ ರೂ.ಗಳಲ್ಲಿ (GST ಹೊರತುಪಡಿಸಿ) | GST 18% | ವಿಸ್ತೀರ್ಣ ಚದರ ಅಡಿಗಳಲ್ಲಿ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| 1 | ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ:03 | ಖಾಲಿ ಇದೆ | ಮಂಗಳೂರು | 1ನೇ ಬಾರಿ | 24849/- | 74547/- | 248/- | 45/- | 96.00 |
| 2 | ಎ.ಟಿ.ಎಂ. ಕೌಂಟರ್ | ಖಾಲಿ ಇದೆ | ಮಂಗಳೂರು | 1ನೇ ಬಾರಿ | 31435/- | 94305/- | 314/- | 57/- | 132.00 |
| 3 | ಜನರಲ್ ಸ್ಟಾಲ್ ಸಂಖ್ಯೆ:06 | ಖಾಲಿ ಇದೆ | ಕುಂದಾಪುರ | 1ನೇ ಬಾರಿ | 61488/- | 184464/- | 615/- | 111/- | 193.68 |

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:788/2017 ರಂತೆ ಇ-ಟೆಂಡರ್‌ಗೆ ಒಳಪಡುವ ಮಳಿಗೆಯ ವಿವರ :**

ಕ.ರಾ.ರ.ಸಾ.ನಿಗಮದ ಮಂಗಳೂರು ವಿಭಾಗದ ವ್ಯಾಪ್ತಿಯ ಉಡುಪಿ ಘಟಕದಲ್ಲಿ ಜಾಹೀರಾತು ಹೋರ್ಡಿಂಗ್ಸ್ ಅಳವಡಿಸಲು ಐದು(05) ವರ್ಷದ ಅವಧಿಗೆ (ಪ್ರತೀ ವರ್ಷ ಶೇ.10ರ ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಉದ್ದೇಶಿಸಿದ್ದು ವಿವರ ಕೆಳಕಂಡಂತಿದೆ :

**<u>ಪ್ಯಾಕೇಜ್ ಸಂ:3-ಜಾಹೀರಾತು ಹೋರ್ಡಿಂಗ್ಸ್:</u>** (Non Lit)

| ಕ್ರ. ಸಂಖ್ಯೆ | ಸ್ಥಳದ ವಿವರ | ವಿಸ್ತೀರ್ಣದ ವಿವರ (ಅಡಿಗಳಲ್ಲಿ) | ಹೋರ್ಡಿಂಗ್ಸ್‌ಗಳ ಸಂಖ್ಯೆ | ಒಟ್ಟು ವಿಸ್ತೀರ್ಣ (ಚ.ಅಡಿಗಳಲ್ಲಿ) | ದರ ಪ್ರತೀ ಚಅಡಿಗೆ | ಮಾಸಿಕ ಪರವಾನಿಗೆ ಶುಲ್ಕ | ಇ.ಎಂ.ಡಿ .ಮೊತ್ತ | ಅರ್ಜಿ ಶುಲ್ಕ (GST ಹೊರತು ಪಡಿಸಿ) | ವಿವರ |
|---|---|---|---|---|---|---|---|---|---|
| 1 | ಉಡುಪಿ ಘಟಕ (ರಾಷ್ಟ್ರೀಯ ಹೆದ್ದಾರಿ ಹೊಂದಿಕೊಂಡಿರುವ) | 15 x 10 | 8 | 1200 | 6.00 | 7200 | 21600 | 100 | 4ನೇ ಬಾರಿ |

| ಕ್ರ.ಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ (ಇ-ಪ್ರಕ್ಯೂರ್‌ಮೆಂಟ್ ಮೂಲಕ) | 01.09.2018 | 12:00 |
| 2 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ). | 04.09.2018 | 10:30 |
| 3 | ಸಂಧಾನ(ವೈಯಕ್ತಿಕ ) | 04.09.2018 | 12:00 |

<u>ಸೂಚನೆಗಳು:</u>

1) ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು, ತಮ್ಮ ಲಿಖಿತ ಮನವಿಯೊಂದಿಗೆ ಮಳಿಗೆಗೆ ನಿಗದಿಪಡಿಸಿರುವ ಅರ್ಜಿ ಶುಲ್ಕ ಮೊತ್ತ ಮತ್ತು ಅನ್ವಯಿಸುವ ತೆರಿಗೆ(GST) ಒಟ್ಟು ಮೊತ್ತಕ್ಕೆ ಪ್ರತ್ಯೇಕ ಡಿ.ಡಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗರವರ ಹೆಸರಿಗೆ ಆನ್‌ಲೈನ್ ಅರ್ಜಿ ಸಲ್ಲಿಕೆಯ ಕೊನೆಯ ದಿನಾಂಕದೊಳಗೆ ಪಡೆಯುವುದು. ಸದರಿ ಡಿ.ಡಿಯ ಜೆರಾಕ್ಸ್ ಪ್ರತಿಯನ್ನು ಇ-ಪೋರ್ಟಲ್‌ನಲ್ಲಿ ಇತರ ದಾಖಲಾತಿಗಳೊಂದಿಗೆ ಅಪ್‌ಲೋಡ್ ಮಾಡುವುದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು
2) ವೈಯಕ್ತಿಕ ಸಂಧಾನ ಅರ್ಜಿ ಫಾರಂ, ಷರತ್ತು ಹಾಗೂ ನಿಬಂಧನೆಗಳನ್ನು, ಮಳಿಗೆಗೆ ನಿಗದಿಪಡಿಸಿದ ನಿಗದಿತ ಅರ್ಜಿ ಶುಲ್ಕಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗರವರ ಹೆಸರಿಗೆ ಡಿ.ಡಿಯನ್ನು ಪಡೆದು **ದಿ:03.08.2018 ರಿಂದ ದಿ:01.09.2018 ರಂದು 12.00ಗಂಟೆಯವರೆಗೆ** ಕಛೇರಿ ವೇಳೆಯಲ್ಲಿ ಸಲ್ಲಿಸಿ ಅರ್ಜಿಯನ್ನು ಪಡೆಯಬಹುದಾಗಿದೆ.
3) ವೈಯಕ್ತಿಕ ಸಂಧಾನದಲ್ಲಿ ಭಾಗವಹಿಸುವಾಗ ಷರತ್ತು ನಿಬಂಧನೆಗಳನ್ನು ಒಪ್ಪಿಕೊಂಡು. ಇ.ಎಂ.ಡಿ ಹಣ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಮಂಗಳೂರು(Divisional Controller, KSRTC, Mangaluru Division, Mangaluru) ರವರ ಹೆಸರಿನಲ್ಲಿ ಪಡೆದ ಡಿ.ಡಿಯ ಮೂಲ ಪ್ರತಿ ಹಾಗೂ ಅಗತ್ಯ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಭರ್ತಿ ಮಾಡಿದ ಅರ್ಜಿ ಫಾರಂ ಹಾಗೂ ಅಡಕದೊಂದಿಗೆ ದಿ**:04.09.2018**ರಂದು ಸಮಯ **12:00**ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು ಮತ್ತು ಟೆಂಡರ್ ಸಮಿತಿಯ ಸಮ್ಮುಖದಲ್ಲಿ ನಡೆಸಲಾಗುವ ಸಂಧಾನದಲ್ಲಿ ಭಾಗವಹಿಸುವುದು.
4) ಸಂಧಾನದಲ್ಲಿ ಭಾಗವಹಿಸಿ ನಿಗದಿಪಡಿಸಿದ ನಿಗದಿತ ಶುಲ್ಕ ಅಥವಾ ಹೆಚ್ಚಿಗೆ ಸೂಚಿಸಿ ಆಯ್ಕೆಗೊಂಡ ಸಂಧಾನಕಾರರು ತಾವು ಸೂಚಿಸಿರುವ ಪರವಾನಿಗೆ ಶುಲ್ಕದ 3ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಆ ದಿನವೇ ಸ್ಥಳದಲ್ಲಿ ಪಾವತಿಸುವುದು. ನಿಗದಿತ ಶುಲ್ಕಕ್ಕಿಂತ ಕಡಿಮೆ ಶುಲ್ಕ ಸೂಚಿಸಿದ ಸಂಧಾನಕಾರರಿಗೆ ಕೇಂದ್ರ ಕಛೇರಿಯಿಂದ ಅನುಮತಿ ಪಡೆದು ಆಯ್ಕೆಗೊಂಡಲ್ಲಿ ಸದರಿಯವರಿಗೆ ತಿಳಿಸಿದ 7 ದಿನದೊಳಗಾಗಿ ನಿಗದಿಪಡಿಸಿರುವ ಭದ್ರತಾ ಠೇವಣಿಯನ್ನು ಪಾವತಿಸಿ ಕರಾರು ಒಪ್ಪಂದ ಮಾಡಿಕೊಳ್ಳುವುದು.
5) ಇ-ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು ನಿಗದಿತ ಇ.ಎಂ.ಡಿ ಮೊತ್ತದಲ್ಲಿ ರೂ.500/-ನ್ನು ಇ-ಪೋರ್ಟಲ್ ಮುಖೇನ ಪಾವತಿಸುವುದು. ಇನ್ನುಳಿದ ಇ.ಎಂ.ಡಿ ಮೊತ್ತವನ್ನು ವಿಭಾಗೀಯ

6) ಇ–ಪೋರ್ಟಲ್‌ನಲ್ಲಿ ಅಪಲೋಡ್ ಮಾಡಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿ ಸೂಚಿಸಿರುವ ಎಲ್ಲಾ ದಾಖಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು. ಅರ್ಜಿ ಶುಲ್ಕದ ಮೂಲ ಡಿ.ಡಿ ಹಾಗೂ ಇ.ಎಂ.ಡಿ. ಮೊತ್ತದ ಮೂಲ ಡಿ.ಡಿಯನ್ನು ಹಾಗೂ ಇ–ಪೋರ್ಟಲ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಟೆಂಡರ್ ತೆರೆಯುವ ದಿನಾಂಕದೊಳಗೆ ಲಿಖಿತ ಮನವಿ ಹಾಗು ಚೆಕ್‌ಲಿಸ್ಟ್‌ನೊಂದಿಗೆ ಈ ಕಛೇರಿಗೆ ಕೆಲಸದ ಅವಧಿಯಲ್ಲಿ ಸಲ್ಲಿಸುವುದು. ತಪ್ಪಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

7) ಇ–ಪೋರ್ಟಲ್ ಟೆಂಡರ್‌ನಲ್ಲಿ ಅಪಲೋಡ್ ಮಾಡಿರುವ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಓದಿ ಒಪ್ಪಿರುವ ಬಗ್ಗೆ ಷರತ್ತು ನಿಬಂಧನೆಗಳ ಪ್ರತಿಯಲ್ಲಿ ಟೆಂಡರ್‌ದಾರರು ಸಹಿ ಮಾಡಿ ಪುನ: ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವುದು.

8) ಇ–ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಅರ್ಜಿದಾರರು ಚಾಲ್ತಿಯಲ್ಲಿರುವ ತಮ್ಮ ದೂರವಾಣಿ/ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಸಲ್ಲಿಸುವುದು.

9) ವಾಣಿಜ್ಯ ಮಳಿಗೆಯನ್ನು ಯಾವ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗಿದ್ದು (As is where is basis) ಅದರಂತೆ ವ್ಯವಹಾರ ಸಲುವಾಗಿ ಅಗತ್ಯವಿರುವ ವ್ಯವಸ್ಥೆಗಳನ್ನು ಎರಡನೇ ಪಾರ್ಟಿಯವರು ಮಾಡಿಕೊಳ್ಳುವುದು ಹಾಗೂ ಈ ಬಗ್ಗೆ ಪೂರ್ವಾನುಮತಿಯನ್ನು ಒಂದನೇ ಪಾರ್ಟಿಯವರಿಂದ ಪಡೆದುಕೊಳ್ಳುವುದು. ಆದರೆ ಮಳಿಗೆಯ ಮೂಲ ಸ್ವರೂಪಕ್ಕೆ ಯಾವುದೇ ರೀತಿಯ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

10) ಆಯ್ಕೆಗೊಂಡ ಬಿಡ್‌ದಾರರು, ಕರಾರು ಒಪ್ಪಂದ ಮಾಡಿಕೊಂಡ ಬಳಿಕವೇ ಎರಡನೇ ಬಿಡ್ಡುದಾರರ ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲಾಗುವುದು.

11) ಸದರಿ ವ್ಯವಹಾರವನ್ನು ನಡೆಸಲು ಕೇಂದ್ರ/ರಾಜ್ಯ ಸರಕಾರ, ಸ್ಥಳೀಯ ಸಂಸ್ಥೆ/ಇಲಾಖೆಗಳಿಂದ ಕಾನೂನು ರೀತ್ಯ ಎಲ್ಲಾ ಅನುಮತಿ / ಕ್ರಮಗಳನ್ನು ಕಡ್ಡಾಯವಾಗಿ ಎರಡನೇ ಪಾರ್ಟಿಯವರು ಪಡೆದುಕೊಳ್ಳುವುದು ಹಾಗೂ ಆ ಸಂಬಂಧ ಎಲ್ಲಾ ಕಾನೂನು ರೀತ್ಯ ಶುಲ್ಕಗಳನ್ನು ಸಕಾಲದಲ್ಲಿ ಪಾವತಿಸುವುದು. ಇದರಿಂದ ಉದ್ಭವಿಸುವ ಎಲ್ಲಾ ಕಾನೂನು ತೊಡಕುಗಳಿಗೆ ಎರಡನೇ ಪಾರ್ಟಿಯವರು ಜವಾಬ್ದಾರಾಗಿರುತ್ತಾರೆ.

12) ಟೆಂಡರ್/ಸಂಧಾನದಲ್ಲಿ ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನಗಳೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಪಾವತಿಸಿ, ಕರ್ನಾಟಕ ಸ್ಟ್ಯಾಂಪ್ ಕಾಯಿದೆ ಪ್ರಕಾರ ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳಬೇಕು.

13) ಬಿಡ್‌ದಾರರು ಜಾಹೀರಾತುಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು, ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ವ್ಯವಹಾರ ಸ್ಥಳದ ಬದಲಾವಣೆಗೆ ಅವಕಾಶವಿರುವುದಿಲ್ಲ.

14) ಓರ್ವ ಬಿಡ್‌ದಾರರು ಒಂದು ಜಾಹೀರಾತು ಪ್ಯಾಕೇಜ್‌ಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

15) ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನಗಳೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಸದರಿ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ನಿಗಮಕ್ಕೆ ಆದ ನಷ್ಟಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

16) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾನಿಗಮವು ಆಗಿಂದಾಗ್ಗೆ ವಿಧಿಸುವ/ಕಾಲ ಕಾಲಕ್ಕೆ ಬದಲಾಗುವ ಷರತ್ತು/ನಿಬಂಧನೆಗಳಿಗೆ ಇದಕ್ಕೆ ಸಂಬಂಧಿಸಿದಂತೆ ಹೊಸದಾಗಿ ಸೇರ್ಪಡೆಯಾಗುವ ಯಾವುದೇ ಕಾನೂನುಗಳಿಗೆ ಪರವಾನಗಿದಾರರು ಬದ್ಧರಾಗಿರಬೇಕು.

17) ಇ–ಟೆಂಡರ್ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಮುರಸ್ಕರಿಸಿ/ತಿರಸ್ಕರಿಸುವ/ಮಾರ್ಪಾಡು ಹಾಗೂ ರದ್ದುಪಡಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗ ಕಛೇರಿ ಕ.ರಾ.ರ.ಸಾ.ನಿಗಮ, ಮಂಗಳೂರು ವಿಭಾಗ, ಬಿಜೈ, ಮಂಗಳೂರು–575004 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 2212453(extension)*207 ನ್ನು ಸಂಪರ್ಕಿಸುವುದು.